**ಅ. ದಾ. ಸಂ. : 296/2013**
**ಪಿ.ಡಬ್ಲ್ಯೂ : 01 ಶೋಭ**

ದಿನಾಂಕ : **29-08-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- 1ನೇ ಪ್ರತಿವಾದಿಯ ಪರ ಶ್ರೀ. ಎಸ್ ಜಿ ಆರ್ . ವಕೀಲರಿಂದ :-**

ದಾವೆ ಹಾಕಲು ಮಾಹಿತಿಯನ್ನು ಯಾರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನಾನೇ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ಯಾರು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನಾನೇ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಕೃಷ್ಣ ಜೀವಂತ ಇದ್ದಾರೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಯಲ್ಲಪ್ಪ ಜೀವಂತಇದ್ದಾರೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಯಲ್ಲಪ್ಪರವರಿಗೆ ಹೆಂಡತಿ ಮತ್ತು ಮಕಕಳು ಇರುತ್ತಾರೆಯೇ ಎಂದರೆ ಸಾಕ್ಷಿ ಸದರಿಯವರಿಗೆ ಹೆಂಡತಿ ಹಾಗೂ 3 ಜನ ಮಕ್ಕಳು ಇರುತ್ತಾರೆ ಸದರಿ ಹೆಂಡತಿ ಯವರ ಹೆಸರು ಯಲ್ಲಮ್ಮ ಹಾಗೂ ಪೆದ್ದಣ್ಣ , ರಾಧ ಹಾಗೂ ಇನ್ನೊಬ್ಬ ಮಗನ ಹೆಸರು ಗೊತ್ತಿರುವುದಿಲ್ಲ. ಸದರಿ ಯಲ್ಲಪ್ಪರವರ ಮಕ್ಕಳನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲವೆಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಯಲ್ಲಪ್ಪರವರು ದಾವೆಯನ್ನು ಸಲ್ಲಿಸುವಾಗ ಜೀವಂತ ಇದ್ದಿದ್ದರ ಎಂದರೆ ಸಾಕ್ಷಿ ಇದ್ದರು ಎಂದು ನುಡಿಯುತ್ತಾರೆ, ಸದರಿಯವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಜೀವಂತ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ದಾವೆಯನ್ನು ಸಲ್ಲಿಸುವಾಗ ಯಲ್ಲಪ್ಪರವರು ಮರಣ ಹೊಂದಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಯಲ್ಲಪ್ಪರವರ ಹೆಂಡತಿ ಮತ್ತು ಮಕ್ಕಳು ಪ್ರಸ್ತುತ ದಾವೆಗೆ ಅಗತ್ಯ ಪಕ್ಷಗಾರರು

ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ಕಾರಣದಿಂದ ನಿಮ್ಮ ದಾವೆ ಊರ್ಜಿತ ಆಗುವುದಿಲ್ಲವೆಂದರೆ ಸಾಕ್ಷಿ ನಾನು ಅವರ ತಾಯಿಯನ್ನು ಪಕ್ಷಗಾರಳನ್ನಾಗಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಮುನಿರಾಜು ಜೀವಂತ ಇದ್ದಾರೆಯೆ ಎಂದರೆ ಸಾಕ್ಷಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿಯವರಿಗೆ ಹೆಂಡತಿ ಮಕ್ಕಳು ಇರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿಯವರಿಗೆ ಹೆಂಡತಿ ಮಕ್ಕಳು ಇದ್ದು ಉದ್ದೇಶ ಪೂರ್ವಕವಾಗಿ ನೀವು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿ ಅವರು ನಮ್ಮ ಊರಿನಲ್ಲಿ ಇರುವುದಿಲ್ಲವೆಂದು ನುಡಿಯುತ್ತಾರೆ. ನಾಗರಾಜುರವರಿಗೆ ಹೆಂಡತಿ ಮತ್ತು ಮಕ್ಕಳು ಇದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಸರ್ವೆ ನಂ.1/6 ರಲ್ಲಿರುವ 2 ಎಕರೆ 23 ಗುಂಟೆ ಜಮೀನನ್ನು ದಿನಾಂಕ 28.10.2004 ರಲ್ಲಿ ನೋಂದಾಯಿತ ಕ್ರಯಪತ್ರದ ಮುಖಾಂತರ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ಜೆ.ಕೆ. ವಾಣಿಯವರು ಕರೀದಿ ಮಾಡಿದಾಗಿನಿಂದ ಸ್ವಾಧೀನದಲ್ಲಿ ಇದ್ದು ಮಾಲೀಕರಾಗಿ ಅನುಭೋಗಿಸಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ವಾದಿಯವರ ಹೆಸರಿಗೆ ಆದ ಮ್ಯುಟೇಷನ್ ಹಾಗೂ ಪಹಣಿಗಳನ್ನು ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನಿಸಿರುವುದಿಲ್ಲವೆಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸರ್ವೆ ನಂ.1/2 ರಲ್ಲಿರುವ ಜಮೀನು ನಾಗಬೋವಿರವರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ನಾಗಾಬೋವಿರವರ ಹೆಂಡತಿ ಹಾಗೂ ಮಕ್ಕಳ ಹೆಸರು ಏನು ಎಂದರೆ ಸಾಕ್ಷಿ ಸದರಿ ನಾಗಬೋವಿರವರಿಗೆ 5 ಜನ ಮಕ್ಕಳು ಇದ್ದು ಅವರ ಹೆಂಡತಿ ಹಾಗೂ ಮಕ್ಕಳ ಹೆಸರು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ 1 ನೇ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ಸಿ. ಜ. ಮತ್ತು ಜೆ. ಎಂ. ಎಫ್? ಸಿ. ಮಾಗಡಿ.**